'ಫಾರಿನ್ ಚಾಕೋಲೇಟು! ನಿನ್ನ ಮಗ ಎಲ್ಲಿ ನೋಡಿರ್‍ತಾನೆ? ತಿಂದಿರ್‍ತಾನೆ?... ಪಾಪ... ಅನ್ನೋ ಮಾತಿನ ಒಗ್ಗರಣೆ. ಹೈಸ್ಕೂಲಿಗೆ ಬರೋ ಹೊತ್ತಿಗೆ ಅವರು ನಮಗೆ ಅವಮಾನ ಮಾಡ್ತಾ ಇದ್ದಾರೆ ಅಂತ ಅರ್ಥವಾಗಿ, ಅಮ್ಮನ ಜೊತೆ ಅವರ ಮನೆಗೆ ಹೋಗೋದು ಬಿಟ್ಟಿದ್ದು...'

ಮಗ ಹೇಳುತ್ತಲೇ ಇದ್ದ. ಅವರ ಮನೆ ದೊಡ್ಡದು ಎಂದು ಅವರು ಹೇಳಿ ಕೊಳ್ಳುತ್ತಾ ಇದ್ದದ್ದು... ಅವರ ಒಡವೆ ಸೀರೆಗಳ ಬಗ್ಗೆ ಅವರು ಮಾತಾಡುತ್ತಲಿದ್ದದ್ದು... ನಾನು ಕಣ್ಣು ಮುಚ್ಚಿಕೊಂಡೆ. ನನಗೆ ನನ್ನ ಅತ್ತೆಯ, ನನ್ನ ತಾಯಿಯ ತೌರಿನ ವಿಷಯ ಅದು. ಸೊಸೆಯ ಬಳಿ ಬಟ್ಟಬಯಲಾಗಲು ಇಷ್ಟವಿಲ್ಲ. ಆದರೆ ಮಗನಿಗೆ ಅವನ ಹೆಂಡತಿಯೇ ಪರಮಾಪ್ತಳು ಈಗ!...

ಏನೂ ಅರಿವಾಗುವುದಿಲ್ಲ, ಮುಗ್ಧ ಎನ್ನುವಂತೆ ಇದ್ದ ಹುಡುಗ ನನ್ನ ಮಗ, ವಿವೇಕ್. ಎಷ್ಟು ಗಮನ ಇರಿಸಿದ್ದಾನೆ. ಎಲ್ಲಾ ಅರ್ಥವಾಗುತ್ತೆ, ಅರ್ಥವಾಗಿದೆ. ಮಾತನಾಡದೆ ಸುಮ್ಮನಿದ್ದರೆ ಏನೂ ಗೊತ್ತಾಗುವುದಿಲ್ಲ ಎಂದುಕೊಂಡಿದ್ದು ನನ್ನ ಮುಗ್ಧತೆ, ಮಾತನಾಡದೆ ಸುಮ್ಮನೆ ಇದ್ದದ್ದು ಅವನ ಹಿರಿಮೆ.

★★★

'ಗಾಂಧಿ ಬಜಾರ್ ಬಳಿ ಇದ್ದ ಅವರ ಮನೆ ಮಾರಿಬಿಟ್ಟಿದಾರಾ?'

ನಾವು ಮುಂದೆ ಹೋದಂತೆ, ಇದ್ದಲ್ಲೇ ಇದ್ದರೂ ಹಿಂದಕ್ಕೆ ಓಡಿ ಹೋಗುತ್ತಿರುವಂತೆ ಕಾಣುವ ಮರಗಳನ್ನು ನೋಡುತ್ತಾ ಕೂತಿದ್ದ ನಾನು ಮಗನತ್ತ ತಿರುಗಿದೆ.

'ಗೊತ್ತಿಲ್ಲ. ಯಾಕೆ?' ಕಣ್ಣರಳಿಸಿದೆ.

'ಕೊಂಡುಕೊಳ್ಳೋಣ ಅಂತ...' ಜೋರಾಗಿ ನಕ್ಕ ವಿವೇಕ್.

'ನಾನು ಹೇಳಲಿಲ್ಲವೇ ಸೌಮ್ಯ... ಅಮ್ಮ ಏನೂ ವಿಚಾರಿಸೊಲ್ಲ... ನೆಮ್ಮದಿಯಾಗಿರ್‍ತಾರೆ ಅಂತ...' ಹೆಂಡತಿಯತ್ತ ತಿರುಗಿ ಹೇಳಿದ.

'ಮಾವಾನೂ ಅತ್ತೆಗೆ ಸರಿಯಾಗಿದ್ದಾರೆ... ಅವರಿಗೆ ಹೇಳಲು ಇಷ್ಟವಿಲ್ಲವೇನೋ... ಅದಕ್ಕಾಗಿಯೇ ಹೇಳಿಲ್ಲ. ಈಗ ನಿನ್ನ ಜೊತೆ ಬಂದು ಅವರನ್ನು ಅಲ್ಲಿ ನೋಡಿ ಮಾಡುವುದೇನು? ನೀನು ಆಕೆ, ಇವಳ ರತ್ನತ್ತೆ... ಎಂದು ಹೇಳೀದ್ದು ನಿಜವೆಂದು ತಿಳಿದ ಮೇಲೆ ಮಾಡುವುದೇನು? ಅವರನ್ನು ನಮ್ಮ ಮನೆಗೆ ಕರೆಯುತ್ತೀರಾ?... ಕರೆದರೆ ಅವರು ಬರುತ್ತಾರಾ? ಸುನೀತಾಗೋ ರಾಘುಗೋ ಫೋನ್ ಮಾಡಿ, ಹೀಗೆ ಬಿಡಬೇಡ, ಕರೆದುಕೊಂಡು ಹೋಗಿ ಎಂದು ಹೇಳಲು ಸಾಧ್ಯವೆ?... ಇಲ್ಲ... ಹೋಗಿ ನೋಡಿ, ನಿನ್ನನ್ನು ಮರೆಸಿ ಒಳಗೆ ಹೋದರಲ್ಲಾ... ಹಾಗೆ ಹೋಗದಂತೆ ಮಾಡಿ, ಮಾತನಾಡಿಸಿ... ಆಕೆಗೆ ಅವಮಾನ ಆಗುವಂತೆ ಮಾಡ್ತೀರಿ... ಅಷ್ಟೇ... ಹೋಗಬೇಡಿ...' ಅಂತ ಮಾವಯ್ಯಾ ಹೇಳಿದರು... ನಾವು ಈಗ ಹೋಗುತ್ತಿರುವುದು ಅವರಿಗೆ ಇಷ್ಟವಿಲ್ಲ...' ಸೌಮ್ಯ ಉದ್ದಕ್ಕೆ ಹೇಳಿದಾಗ ನಾನು ಉಗುಳು ನುಂಗಿದೆ.

'ಇವರು ಹಾಗೆ ಹೇಳಿದ್ರಾ?' ಡ್ರೈವರ್ ಗಕ್ಕನೆ ಬ್ರೇಕ್ ಹಾಕಿದ. ಹಾರ್ನ್ ಮೇಲೆ ಕೈ, ಕರ್ಕಶ ಶಬ್ದ. ಜೊತೆಗೆ ಕಿಟಕಿಯಿಂದ ತಲೆ ಹೊರ ಹಾಕಿ, ಮುಂದಿದ್ದ ಗಾಡಿಯ ಚಾಲಕನನ್ನು ಜೋರಾಗಿ ಬೈಯ್ಯಲಾರಂಭಿಸಿದ.

'ಆ ಗಾಡಿಯ ಮುಂದಿನ ಗಾಡಿಯೂ ನಿಂತಿದೆ. ನೀನು ಕಿರುಚಾಡಿ, ಹಾರ್ನ್ ಮಾಡಿದ್ರೆ ಏನು ಪ್ರಯೋಜನ ಸ್ವಲ್ಪ ತಾಳ್ಮೆ ಇರಲಿ...' ಕೊಂಚ ದನಿ ಎತ್ತರಿಸಿ ಡ್ರೈವರ್‌ಗೆ ಹೇಳಿದೆ. ಗಾಡಿ ನಿಂತಿದ್ದರಿಂದ ಹಿಂದಕ್ಕೆ ಓಡುತ್ತಿದ್ದ ಮರಗಳು ನಿಂತವು. ಚಲನೆ, ನಿನ್ನ ಭ್ರಮೆಯಷ್ಟೇ ಎಂಬಂತೆ ತಮ್ಮ ಮಜಭೂತಾದ ಕಾಂಡವನ್ನೂ, ಹೊರ ಚಿಮ್ಮಿದ ಬೇರುಗಳನ್ನು ತೋರುತ್ತಾ ನಿಂತ ಆ